ಮೈಸೂರು ನಂದಿನಿ ಫ್ಯಾಮಿಲಿ ರೆಸ್ಟೋರೆಂಟ್
mysore nandhini Heritage
Family Restaurant Veg & Non Veg
Andhra Style Irwin Road, Near KSRTC Bus Stand Mysuru - 01
Tandoori Chinese Sea Food
Ph: 0821 - 4191009, 2430241
90082 85555 Parking Available
FREE HOME DELIVERY

ಆಂದೋಲನ

ದಿನಪತ್ರಿಕೆ

ಸಂಪಾದಕ : ರಾಜಶೇಖರ ಕೋಟಿ

ASHOK LEYLAND LIGHT VEHICLES
ಅಕ್ಷರಾ ಮೋಟಾರ್ಸ್ - ಕಾವೇರಿ ಮೋಟಾರ್ಸ್‌ನ ಘಟಕ
ಸಂಪರ್ಕಿಸಿ : +91 9900025519

ಗೌರಿ ಲಂಕೇಶ್ ಹತ್ಯೆ ಖಂಡಿಸಿರುವ ನಟ ಪವನ್ ಕಲ್ಯಾಣ್ 'ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ವ್ಯಕ್ತಿಯನ್ನು ಹತ್ಯೆ ಮಾಡುವುದರಿಂದ ಅವರ ಅಭಿವ್ಯಕ್ತಿಯನ್ನು ತಡೆಯಲು ಸಾಧ್ಯವಿಲ್ಲ. ಒಬ್ಬ ಗೌರಿಯ ಈ ಹತ್ಯೆ ಲಕ್ಷಾಂತರ ಗೌರಿಯರನ್ನು ಸೃಷ್ಟಿಸುತ್ತದೆ' ಎಂದು ಟ್ವೀಟ್ ಮಾಡಿದ್ದಾರೆ.

ಗೌರಿ ಹತ್ಯೆ ಲಕ್ಷಾಂತರ ಗೌರಿಯರನ್ನು ಸೃಷ್ಟಿಸುತ್ತದೆ

ಸ್ವಚ್ಛ ನಗರ ಅಭಿಯಾನಕ್ಕೆ ಜಾವಗಲ್ ಚಾಲನೆ

ಗರಿಷ್ಠ: ೨೭° । ಕನಿಷ್ಠ: ೧೭° ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಮೈಸೂರು ಮಹಾ ನಗರ ಪಾಲಿಕೆ ಆರಂಭಿಸಿರುವ 'ಸ್ವಚ್ಛ ನಗರ' ಅಭಿಯಾನಕ್ಕೆ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರು ರಾಘವೇಂದ್ರ ನಗರದಲ್ಲಿ ಶುಕ್ರವಾರ ಬೆಳಿಗ್ಗೆ ಚಾಲನೆ ನೀಡಿದರು.

ಸಂಪುಟ: ೪೬ ಸಂಚಿಕೆ: ೨೪೨, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೧೮ ● ತದಿಗೆ– ರೇವತಿ, ಶನಿವಾರ, ಸೆ.೯, ೨೦೧೭, ದೂರವಾಣಿ: ೨೪೪೨೫೧೧, ೨೪೪೨೫೧೪, ೨೪೪೨೫೧೫, ಫ್ಯಾಕ್ಸ್: ೨೪೪೨೫೧೬, ಪುಟ: ೧೨, ರೂ. ೩

ಕೃಷಿಗೆ ನೀರು; ರೈತರ ಹರ್ಷ

ನೀರಾವರಿ ಸಲಹಾ ಸಮಿತಿ ಸಭೆ ತೀರ್ಮಾನ: ಸಚಿವ ಕೃಷ್ಣಪ್ಪ ಪ್ರಕಟ

ಮಂಡ್ಯ ಜಿಪಂ ಕಚೇರಿಯಲ್ಲಿ ಸಚಿವ ಎಂ.ಕೃಷ್ಣಪ್ಪ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಕಾವೇರಿ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಶಾಸಕ ಚಲುವರಾಯಸ್ವಾಮಿ, ಜಿಲ್ಲಾಧಿಕಾರಿ ಮಂಜುಶ್ರೀ ಮತ್ತಿತರರಿದ್ದರು.

ಮಂಡ್ಯ,ಸೆ.೮– ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆಯ ನೀರಿನ ಸಂಗ್ರಹ ೧೦೨ ಅಡಿಗಳನ್ನು ಮುಟ್ಟಿದ್ದರ ಫಲ ಕೊನೆಗೂ ಸಕ್ಕರೆ ಜಿಲ್ಲೆಯ ರೈತ ಸಮುದಾಯಕ್ಕೆ ದೊರಕುವಂತಾಗಿದೆ. ಕೃಷಿಗಾಗಿ ನಾಲೆಗೆ ನೀರು ಹರಿಸಿ ಎಂಬ ಅವರ ಬಹುದಿನದ ಬೇಡಿಕೆ ಕಡೆಗೂ ಈಡೇರುವಂತಾಗಿದೆ.

ಜಿಲ್ಲೆಯ ಕೃಷಿ ಕ್ಷೇತ್ರದಲ್ಲಿ ಬೆಳೆ ತೆಗೆಯಲು ನಾಲೆಯಲ್ಲಿ ನೀರು ಹರಿಸಬೇಕೆಂಬ ರೈತರ ಬಹು ದಿನಗಳ ಬೇಡಿಕೆಗೆ ರಾಜ್ಯ ಸರ್ಕಾರ ಸ್ಪಂದಿಸಿದ್ದು, ಭಾನುವಾರದಿಂದಲೇ ಕಟ್ಟು ಪದ್ಧತಿಯಲ್ಲಿ ನೀರು ಹರಿಸುವುದಾಗಿ ಪ್ರಕಟಿಸಿದೆ. ಇದಕ್ಕೆ ಜಿಲ್ಲೆಯ ರೈತರು ಭಾರೀ ಹರ್ಷ ವ್ಯಕ್ತ ಪಡಿಸಿದ್ದಾರೆ.

ನಗರದಲ್ಲಿನ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಕೃಷ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಸಂಜೆ ನಡೆದ ಕಾವೇರಿ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

- ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ೧೦೨ ಅಡಿಗೇರಿದ್ದರ ಫಲ
- ನಾಳೆಯಿಂದಲೇ ೧೮ ದಿನ ಅವಧಿಗೆ ಕಟ್ಟುಪದ್ಧತಿಯಡಿ ನೀರು
- ಕೆಆರ್‌ಎಸ್ ವ್ಯಾಪ್ತಿಯ ೬ ನಾಲೆಗಳಲ್ಲಿಯೂ ಹರಿಯಲಿದೆ ನೀರು
- ಹೇಮಾವತಿ ಅಣೆಕಟ್ಟೆಯಿಂದಲೂ ಮಂಡ್ಯ ಭಾಗದ ನಾಲೆಗೆ ನೀರು
- ಅಲ್ಪಾವಧಿ ಬೆಳೆಗಳನ್ನಷ್ಟೇ ಕೃಷಿ ಮಾಡುವಂತೆ ಸಚಿವರ ಮನವಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಯ ನಾಲೆಗಳಿಗೆ ಕಟ್ಟು ಪದ್ಧತಿಯಡಿ ನೀರು ಹರಿಸುವುದಾಗಿ ಶುಕ್ರವಾರ ಬೆಳಿಗ್ಗೆಯಷ್ಟೇ ಜಿಲ್ಲೆಯ ರೈತ ಸಂಘದ ಮುಖಂಡರಿಗೆ ಭರವಸೆ ನೀಡಿದ್ದರು.

ಸಲಹಾ ಸಮಿತಿ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎಂ.ಕೃಷ್ಣಪ್ಪ ಅವರು, ಜಿಲ್ಲೆಯಲ್ಲಿನ ಕೃಷಿ ಕ್ಷೇತ್ರದ ಬೆಳೆಗಳಿಗೆ ೧೮ ದಿನಗಳ ಅವಧಿಗೆ ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗುವುದು. ಈ ಕ್ರಮ ಸೆ.೧೦ರಿಂದ ಜಾರಿಗೆ ಬರಲಿದೆ ಎಂದು ಹೇಳಿದರು.

ಸಲಹಾ ಸಮಿತಿ ಸಭೆಯಲ್ಲಿ ಮೊದಲಿಗೆ ೧೫ ದಿನಗಳ ಅವಧಿಗೆ ಕಟ್ಟು ಪದ್ಧತಿಯಲ್ಲಿ ನೀರು ಹರಿಸಬೇಕೆಂದು ತೀರ್ಮಾನಿಸಲಾಗಿತ್ತು. ಆದರೆ, ಸಭೆಯಲ್ಲಿದ್ದ ಕೆಲವು ಅಧಿಕಾರಿಗಳು ನಾಲೆಯ ಕೊನೆಯ ಭಾಗಕ್ಕೆ ನೀರು ತಲುಪಬೇಕಾದರೆ ೧೮ ದಿನಗಳ ಕಾಲವಾದರೂ ನೀರು ಹರಿಸಬೇಕು ಎಂದು ಗಮನ ಸೆಳೆದಿದ್ದರಿಂದ ನಂತರದಲ್ಲಿ ನಿರ್ಧಾರ ಬದಲಿಸಲಾಯಿತು.

⏭ ೮



ನೀರು ಹರಿಸಲಾಗುವುದು: ಸಿಎಂ ಭರವಸೆ

ಮಂಡ್ಯ ಜಿಲ್ಲೆಯಲ್ಲಿ ಶುಕ್ರವಾರ ನಡೆದ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಸಮಾರಂಭದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಯ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಬಿಡಲಾಗುವುದು ಎಂದು ತಿಳಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೂಬಿನಕೆರೆ ಹೆಲಿಪ್ಯಾಡ್‌ನಲ್ಲಿ ಬಂದಿಳಿದಾಗ ರೈತ ಸಂಘದ ಮುಖಂಡರು ಮತ್ತು ಕಾರ್ಯಕರ್ತರು, ಜಿಲ್ಲೆಯ ಕೃಷಿ ಕ್ಷೇತ್ರಕ್ಕೆ ನೀರು ಹರಿಸುವಂತೆ ಮಾಡಿ ಬೆಳೆ ತೆಗೆಯಲು ಅನುಕೂಲ ಮಾಡಿಕೊಡಿ ಎಂದು ಮನವಿಪತ್ರ ಸಲ್ಲಿಸಿದ್ದರು.

ಕೈಗೂಡಿದ ಆಶಾವಾದ

ಸರ್ಕಾರದ ಭರವಸೆ; ಆಶಾ ಕಾರ್ಯಕರ್ತೆಯರ ಧರಣಿ ಅಂತ್ಯ

ಬೆಂಗಳೂರು,ಸೆ.೮– ವೇತನ ಹೆಚ್ಚಳ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟು ನಗರದಲ್ಲಿ ಗುರುವಾರ ಆರಂಭಿಸಿದ್ದ ಅನಿರ್ದಿಷ್ಟಾವಧಿ ಧರಣಿಯನ್ನು ಆಶಾ ಕಾರ್ಯಕರ್ತೆಯರು ಸರ್ಕಾರದ ಭರವಸೆ ಮೇರೆಗೆ ಶುಕ್ರವಾರ ರಾತ್ರಿ ಕೈಬಿಟ್ಟರು.

ವೇತನ ಹೆಚ್ಚಳ, ಭವಿಷ್ಯನಿಧಿ(ಪಿಎಫ್), ನೌಕರರ ರಾಜ್ಯ ವಿಮೆ (ಇಎಸ್‌ಐ) ಸೌಲಭ್ಯ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯದ ಸಾವಿರಾರು ಆಶಾ ಕಾರ್ಯಕರ್ತೆಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದರು.

- ಸದ್ಯಕ್ಕೆ ಗೌರವಧನ ೩,೫೦೦ ರೂ.ಗಳಿಗೆ ಏರಿಕೆ
- ಕೆಲ ತಿಂಗಳ ನಂತರ ೬ ಸಾವಿರ ರೂ.ಗೆ ಹೆಚ್ಚಳ
- ಆರೋಗ್ಯ ಸಚಿವ ರಮೇಶ್ ಕುಮಾರ್ ಭರವಸೆ
- ಧರಣಿ ಕೊನೆಗೊಳಿಸಲು ಮಳೆಯೂ ಕಾರಣ

ಆರೋಗ್ಯ ಸಚಿವ ಕೆ.ಆರ್. ರಮೇಶ್ ಕುಮಾರ್ ಅವರು ಶುಕ್ರವಾರ ಸಂಜೆ ನಡೆಸಿದ ಎರಡನೇ ಸುತ್ತಿನ ಮಾತುಕತೆ ಫಲಪ್ರದವಾಯಿತು.

ಆಶಾ ಕಾರ್ಯಕರ್ತೆಯರ ಗೌರವಧನವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ೧೫೦೦ರಿಂದ ೩೫೦೦ ರೂ.ಗಳಿಗೆ ಹೆಚ್ಚಿಸಲಾಗುವುದು. ಕೆಲ ದಿನಗಳ ನಂತರ ೬ ಸಾವಿರ ರೂ. ನೀಡಲಾಗುವುದು ಎಂಬ ಸರ್ಕಾರದ ಭರವಸೆಯನ್ನು ಒಪ್ಪಿಕೊಂಡ ಕಾರ್ಯಕರ್ತೆಯರು ಪ್ರತಿಭಟನೆ ಕೈಬಿಡಲು ನಿರ್ಧರಿಸಿದರು.

ಬೆಂಗಳೂರಿನಲ್ಲಿ ಶುಕ್ರವಾರ ಧರಣಿ ಮಧ್ಯೆಯೇ ತಮ್ಮ ಪುಟ್ಟ ಮಕ್ಕಳಿಗೆ ಊಟ ತಿನಿಸುತ್ತಿರುವ ಆಶಾ ಕಾರ್ಯಕರ್ತೆಯರು.

ಕ್ಷೇಮಾಭಿವೃದ್ಧಿ ಸಂಘ ರಚನೆ, ನಿಗದಿತ ವೇಳೆಗೆ ವೇತನ ಪಾವತಿ, ಕೇಂದ್ರ ಸರ್ಕಾರದ ಭತ್ಯೆ ಮುಂದುವರೆಯಲಿದೆ ಎಂದು ಸಚಿವ ರಮೇಶ್ ಕುಮಾರ್ ಭರವಸೆ ನೀಡಿದರು.

ಪುಟ್ಟ ಮಕ್ಕಳೊಂದಿಗೆ ದೂರ ದೂರದ ಊರುಗಳಿಂದ ಬಂದು ಎರಡು ದಿನ ಬಿಸಿಲು, ಮಳೆ ಲೆಕ್ಕಿಸದೇ ಪ್ರತಿಭಟನೆ ನಡೆಸುತ್ತಾ ಬಳಲಿದ್ದ ಆಶಾ ಕಾರ್ಯಕರ್ತೆಯರ ನೋವು ತಕ್ಕಮಟ್ಟಿಗಾದರೂ ತಗ್ಗಿದಂತಾಯಿತು. ಎರಡನೇ ದಿನದ ಧರಣಿ ವೇಳೆಗೆ ನಮ್ಮ ಬೇಡಿಕೆಗಳು ಬಹುತೇಕ ಈಡೇರಿರುವುದರಿಂದ ಪ್ರತಿಭಟನೆಯನ್ನು ವಾಪಸ್ ಪಡೆಯಲಾಗುತ್ತಿದೆ ಎಂದು ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಕಾರ್ಯದರ್ಶಿ ಡಿ.ನಾಗಲಕ್ಷ್ಮಿ ಪ್ರಕಟಿಸಿದರು.

⏭ ೧೧

ಹಿರಿಯ ಚಿತ್ರನಟ ಸುದರ್ಶನ್ ನಿಧನ

೨.೫.೧೯೩೯ – ೮.೯.೨೦೧೭

ಬೆಂಗಳೂರು,ಸೆ.೮– ಕನ್ನಡ ಚಿತ್ರರಂಗದ ಹಿರಿಯ ನಟ ಆರ್.ಎನ್.ಸುದರ್ಶನ್ (೭೮) ಶುಕ್ರವಾರ ನಿಧನರಾದರು.

ಕೆಲವು ದಿನಗಳ ಹಿಂದೆ ಮನೆಯಲ್ಲಿ ಕಾಲು ಜಾರಿ ಬಿದ್ದು ಗಾಯಗೊಂಡಿದ್ದ ಸುದರ್ಶನ್ ಅವರನ್ನು ಬನ್ನೇರುಘಟ್ಟದ ಸಾಗರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದ ಅವರು ಶುಕ್ರವಾರ ಮಧ್ಯಾಹ್ನ ಸಾವನ್ನಪ್ಪಿದರು.

ಶ್ರೀರಾಮಪುರದ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಸಂಸ್ಕಾರ ಸಂಜೆ ನೆರವೇರಿತು.

ಹಿರಿಯ ಕಲಾವಿದರಾದ ಶಿವರಾಮ್, ಜಯಮಾಲ, ಜಗ್ಗೇಶ್, ನಿರ್ದೇಶಕರಾದ ಭಗವಾನ್, ನಾಗತಿಹಳ್ಳಿ ಚಂದ್ರಶೇಖರ್ ಮೊದಲಾದ ಚಿತ್ರರಂಗದ ಪ್ರಮುಖರು ಸಂತಾಪ ಸೂಚಿಸಿದ್ದಾರೆ.

(ವಿವರ ಪುಟ ೯)

ಸುಳಿವು ಕೊಟ್ಟರೆ ೧೦ ಲಕ್ಷ ರೂ.

ಗೌರಿ ಲಂಕೇಶ್ ಹತ್ಯೆ ಪ್ರಕರಣ: ಎಸ್‌ಐಟಿ ಜತೆಗಿನ ಚರ್ಚೆ ನಂತರ ರಾಜ್ಯ ಸರ್ಕಾರದ ಘೋಷಣೆ

ಬೆಂಗಳೂರು,ಸೆ.೮– ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹಂತಕರ ಬಗ್ಗೆ ಸುಳಿವು ನೀಡಿದವರಿಗೆ ೧೦ ಲಕ್ಷ ರೂ. ಬಹುಮಾನ ನೀಡುವುದಾಗಿ ರಾಜ್ಯ ಸರ್ಕಾರ ಶುಕ್ರವಾರ ಘೋಷಿಸಿದೆ.

ಕಳೆದೆರಡು ದಿನಗಳಿಂದ ಗೌರಿ ಲಂಕೇಶ್ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ)ಕ್ಕೆ ದುಷ್ಕರ್ಮಿಗಳ ಕುರಿತು ಈವರೆಗೂ ಯಾವುದೇ ಸುಳಿವು ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ, ಹಂತಕರ ಕುರಿತು ಮಹತ್ವದ ಸುಳಿವು ಕೊಟ್ಟವರಿಗೆ ೧೦ ಲಕ್ಷ ರೂ. ಬಹುಮಾನ ನೀಡಲಾಗುವುದು ಎಂಬ ಪ್ರಕಟಣೆ ಹೊರಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬೆಳಿಗ್ಗೆ ಗೃಹ ಕಚೇರಿ ಕೃಷ್ಣಾದಲ್ಲಿ ಗೃಹ ಸಚಿವ ರಾಮಲಿಂಗಾರೆಡ್ಡಿ, ಡಿಜಿಪಿ ಆರ್.ಕೆ.ದತ್ತ, ಗುಪ್ತದಳದ ಡಿಜಿ ಎ.ಎಂ.ಪ್ರಸಾದ್, ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್ ಸೇರಿದಂತೆ ಹಲವು ಅಧಿಕಾರಿಗಳಿಂದ ಪ್ರಕರಣದ ತನಿಖೆ ಬಗ್ಗೆ ಮಾಹಿತಿ ಪಡೆದರು.

⏭ ೮

- ಗೃಹ ಕಚೇರಿ ಕೃಷ್ಣಾದಲ್ಲಿ ಸಿಎಂ, ಗೃಹ ಸಚಿವರು, ಡಿಜಿಪಿ, ಎಸ್‌ಐಟಿ ಮುಖ್ಯಸ್ಥರ ಸಭೆ
- ಮುಖ್ಯಮಂತ್ರಿಗಳಿಗೆ ಈವರೆಗಿನ ತನಿಖೆಯ ಪ್ರಗತಿಯ ಸಮಗ್ರ ಮಾಹಿತಿ
- ಇಬ್ಬರು ಸಚಿವರು, ವಿಚಾರವಾದಿಗಳಿಗೆ ಬೆದರಿಕೆ ಕರೆ-ಭದ್ರತೆ ಒದಗಿಸಲು ನಿರ್ಧಾರ

ಜೀವರಾಜ್ ವಿಚಾರಣೆಗೆ ಸೂಚನೆ

ವಿವಾದಾತ್ಮಕ ಹೇಳಿಕೆ ನೀಡಿರುವ ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ಅವರು ಯಾವ ಕಾರಣಕ್ಕಾಗಿ ಹಾಗೆ ಹೇಳಿಕೆ ನೀಡಿದ್ದಾರೆ ಎಂಬ ಬಗ್ಗೆ ಮಾಹಿತಿ ಪಡೆಯಲು ಎಸ್‌ಐಟಿಗೆ ಸೂಚಿಸಲಾಗಿದೆ. ಸಾಧ್ಯವಾದರೆ ಅವರನ್ನು ವಿಚಾರಣೆಗೊಳಪಡಿಸಲು ತಿಳಿಸಲಾಗಿದೆ. ಅವರ ಹೇಳಿಕೆ ನಾನಾ ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ.

–ರಾಮಲಿಂಗಾರೆಡ್ಡಿ, ಗೃಹ ಸಚಿವ

ನದಿ ಉಳಿಸದಿದ್ದರೆ ದೇಶಕ್ಕೇ ಗಂಡಾಂತರ

ನದಿಗಳನ್ನು ರಕ್ಷಿಸಿ ಅಭಿಯಾನದಲ್ಲಿ ಸದ್ಗುರು ಜಗ್ಗಿ ವಾಸುದೇವ್ ಕಳವಳ

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ಸಂಜೆ 'ರ್‍ಯಾಲಿ ಫಾರ್ ರಿವರ್' ಕಾರ್ಯಕ್ರಮದಲ್ಲಿ ಈಶಾ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷ ಸದ್ಗುರು ಜಗ್ಗಿ ವಾಸುದೇವ್, ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಧರ್ಮಸ್ಥಳದ ಡಾ.ವೀರೇಂದ್ರ ಹೆಗ್ಗಡೆ, ಸಂಸದ ಪ್ರತಾಪ ಸಿಂಹ, ಶಾಸಕ ಎಂ.ಕೆ.ಸೋಮಶೇಖರ್, ಚಿತ್ರನಟ ಗಣೇಶ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು,ಸೆ.೮– ನದಿಗಳನ್ನು ರಕ್ಷಿಸದಿದ್ದರೆ ದೇಶಕ್ಕೆ ಭವಿಷ್ಯದಲ್ಲಿ ಭಾರಿ ಗಂಡಾಂತರ ಕಾದಿದೆ. ನದಿ ಮನುಷ್ಯನನ್ನು ಮಾತ್ರ ಉಳಿಸುವುದಿಲ್ಲ. ದೇಶದ ಸಂಪತ್ತನ್ನೇ ಕಾಪಾಡುತ್ತದೆ ಎಂದು ಈಶಾ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಸದ್ಗುರು ಜಗ್ಗಿ ವಾಸುದೇವ್ ಎಚ್ಚರಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ಸಂಜೆ 'ರ್‍ಯಾಲಿ ಫಾರ್ ರಿವರ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅರಣ್ಯ ಸಂಪತ್ತು ಹಾಗೂ ನದಿ ಸಂಪತ್ತು ದೇಶಗಳ ಫಲವತ್ತತೆಯ ಕಣ್ಣುಗಳು. ಆದರೆ ಅತಿಯಾಸೆಗೆ ಬಲಿಯಾಗುತ್ತಿರುವ ನಾವು, ಅರಣ್ಯ ಹಾಗೂ ನದಿಯನ್ನು ಕಳೆದುಕೊಳ್ಳುವ ಮಟ್ಟಕ್ಕೆ ಹೋಗುತ್ತಿದ್ದೇವೆ. ಈ ಪರಿಸ್ಥಿತಿ ಹೀಗೆ ಮುಂದುವರಿದರೆ ದೇಶದ ಕೃಷಿ, ಕೈಗಾರಿಕಾ ವಲಯ ಸೇರಿ ಸಂಪನ್ಮೂಲದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದರು.

ನದಿಗಳು ಹಾಗಿದ್ದವು, ಹೀಗಿದ್ದವು, ಜೀವನದಿಯಾಗಿತ್ತು ಎಂದು ಹಳಹಳಿಸುವುದಕ್ಕಿಂತ, ಮುಂದಿನ ಪೀಳಿಗೆಗೆ ನದಿಗಳನ್ನು ಹೇಗೆ ರಕ್ಷಣೆ ಮಾಡಬೇಕೆಂದು ಚಿಂತಿಸಬೇಕಿದೆ.

⏭ ೧೧

ದಸರಾ ಕಾಮಗಾರಿಗೆ ವಾರದ ಗಡುವು

ದಸರಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಡಿ.ರಂದೀಪ್ ಸೂಚನೆ

ಮೈಸೂರು,ಸೆ.೮– ಮುಂದಿನ ಒಂದು ವಾರದೊಳಗೆ ದಸರಾಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಡಿ.ರಂದೀಪ್ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಜ್ಯ ಸರ್ಕಾರದ ಅಪರ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಲಕ್ಷ್ಮಿನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ದಸರಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಜಂಬೂಸವಾರಿ ಮೆರವಣಿಗೆ ತೆರಳುವ ರಸ್ತೆಗಳ ಅಭಿವೃದ್ಧಿ ಸೇರಿದಂತೆ ನಗರದ ಪ್ರಮುಖ ರಸ್ತೆಗಳ ಕಾಮಗಾರಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಸೆ.೧೫ರೊಳಗೆ ಪೂರ್ಣಗೊಳಿಸಬೇಕು ಎಂದು ತಾಕೀತು ಮಾಡಿದರು.

ಲಕ್ಷ್ಮಿನಾರಾಯಣ್ ಅವರು, ಬನ್ನಿಮಂಟಪದ ಸಮೀಪ ಮೈಸೂರು–ಬೆಂಗಳೂರು ರಸ್ತೆ ಅಗಲೀಕರಣ ಕಾಮಗಾರಿ ನಡೆಯುತ್ತಿದ್ದು, ವಾಹನಗಳ ಸಂಚಾರ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿದೆ. ಕೇವಲ ಜಂಬೂಸವಾರಿ ಸಂಚರಿಸುವ ಮಾರ್ಗವಲ್ಲದೇ ಜನರಿಗೆ ತೊಂದರೆಯಾಗುತ್ತಿರುವ ಎಲ್ಲಾ ರಸ್ತೆಗಳನ್ನು ದುರಸ್ತಿಗೊಳಿಸಬೇಕು ಎಂದು ಸೂಚನೆ ನೀಡಿದರು.

ಈ ಸಂದರ್ಭ ಡಿ.ರಂದೀಪ್ ಅವರು, ಲೋಕೋಪಯೋಗಿ ಇಲಾಖೆಗೆ ತ್ವರಿತವಾಗಿ ಕೆಲಸ ಮುಗಿಸುವಂತೆ ಸೂಚಿಸಿದರೂ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಡಿ.ರಂದೀಪ್ ಅವರು, ಕಳೆದ ಬಾರಿ ಅರಮನೆ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಟೀಕೆ ಕೇಳಿಬಂದಿತ್ತು. ಹಾಗಾಗಿ ಅಲ್ಲಿ ಈ ಬಾರಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಕಲಾತಂಡಗಳಿಗೆ ಮಾತ್ರ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದರು.

⏭ ೧೧

ಮೈಸೂರು ಡಿಸಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ದಸರಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಲಕ್ಷ್ಮಿನಾರಾಯಣ್ ಮಾತನಾಡಿದರು. ಜಿಲ್ಲಾಧಿಕಾರಿ ಡಿ.ರಂದೀಪ್, ಜಿಪಂ ಸಿಇಒ ಪಿ.ಶಿವಶಂಕರ್, ಅಪರ ಜಿಲ್ಲಾಧಿಕಾರಿ ಟಿ.ಯೋಗೇಶ್, ಮುಡಾ ಆಯುಕ್ತ ಎಂ. ಮಹೇಶ್, ಡಿಸಿಪಿ ಅಶೋಕ ಅಮಟ, ಡಾ.ಸೌಭಾಗ್ಯ ಮತ್ತಿತರರು ಭಾಗವಹಿಸಿದ್ದರು.

ವಸ್ತು ಪ್ರದರ್ಶನ ದಸರಾ ಉತ್ಸವದ ಮೊದಲ ದಿನವೇ ಪೂರ್ಣ ಸಿದ್ಧಗೊಂಡಿರಬೇಕು. ಮುಡಾ ವತಿಯಿಂದ ಬನ್ನಿ ಮಂಟಪದಲ್ಲಿ ಬಹು ಮಹಡಿ ವಾಹನ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸ ಬೇಕು.

–ಲಕ್ಷ್ಮಿನಾರಾಯಣ್

ದಸರಾ ಕವಿಗೋಷ್ಠಿ ಉದ್ಘಾಟನೆಗೆ ಹೆಸರಾಂತ ಕವಿ ಸಿದ್ಧಲಿಂಗಯ್ಯ ಅವರನ್ನು ಆಹ್ವಾನಿಸಲಾಗುವುದು.

ಕವಿಗೋಷ್ಠಿ ಉಪ ಸಮಿತಿ ಅಧಿಕಾರಿ

ಬೆಂಗಳೂರು ಮಳೆಗೆ ೪ ಬಲಿ

- ಮರ ಬಿದ್ದು ಕಾರಿನಲ್ಲಿದ್ದ ಮೂವರ ದುರ್ಮರಣ
- ಮೋರಿಯಲ್ಲಿ ಕೊಚ್ಚಿ ಹೋದ ಯುವಕ?

ಬೆಂಗಳೂರು,ಸೆ.೮– ಶುಕ್ರವಾರ ರಾತ್ರಿ ಗುಡುಗು ಸಹಿತ ಸುರಿದ ಭಾರೀ ಮಳೆಗೆ ನಗರ ತತ್ತರಿಸಿಹೋಗಿದ್ದು, ಜೆಸಿ ರಸ್ತೆ ಬಳಿಯ ಮಿನರ್ವ ವೃತ್ತದ ಸಮೀಪ ಕಾರಿನ ಮೇಲೆ ಮರ ಬಿದ್ದು ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಇನ್ನೊಂದೆಡೆ ಶೇಷಾದ್ರಿಪುರಂ ಕೆಳ ಸೇತುವೆ ಬಳಿ ಯುವಕ ಮೋರಿಯಲ್ಲಿ ಕೊಚ್ಚಿ ಹೋಗಿರುವ ಶಂಕೆ ವ್ಯಕ್ತವಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಕುಟುಂಬವೊಂದು ಮಿನರ್ವ ವೃತ್ತದ ಬಳಿ ಗ್ಯಾರೇಜ್‌ನಲ್ಲಿ ಕಾರು ರಿಪೇರಿ ಮಾಡಿಸುತ್ತಿದ್ದರು. ಮಳೆ ಬಂದ ಕಾರಣ ತೋಯ್ದುಕೊಳ್ಳುವುದರಿಂದ ತಪ್ಪಿಸಿಕೊಳ್ಳಲು ಕಾರಿನೊಳಗೆ ಕುಳಿತರು.

⏭ ೧೧

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 393
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ ಜ್ಯುವೆಲ್ಸ್ THOLASI JEWELS
₹2845 1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926

NH Avati L Ramaseshaiah and Lakshmi Devamma Multispeciality Clinic Shivarampet Mysore
ಡಯಾಬಿಟಿಸ್(ಮಧುಮೇಹ) ಕ್ಲಿನಿಕ್
11, 12 ಮತ್ತು 13 ಸೆಪ್ಟೆಂಬರ್, 2017 (ಬೆಳಗ್ಗೆ 9.00 ರಿಂದ 2.00)
ಅಪಾಯಕಾರಿ ಅಂಶಗಳು:
• ಕುಟುಂಬ ಇತಿಹಾಸ
• ವ್ಯಾಯಾಮದ ಕೊರತೆ
• ಅನಾರೋಗ್ಯಕರ ಆಹಾರ ಪದ್ಧತಿ
• ಅತಿಯಾದ ತೂಕ
ಸೇವೆಗಳು:
• ರಕ್ತದೊತ್ತಡ
• ಎಫ್‌ಬಿಎಸ್ & ಪಿಪಿಬಿಎಸ್
• ಯೂರಿನ್ ರೊಟೀನ್
• ವೈದ್ಯರೊಂದಿಗೆ ಸಮಾಲೋಚನೆ
ಡಯಾಬಿಟಿಸ್ ಕ್ಲಿನಿಕ್‌ನ ಶುಲ್ಕ ₹ 100/-
ನೋಂದಣಿಗಾಗಿ ಕರೆಮಾಡಿ: 88847 44144
ಶೇ 10% ರಿಯಾಯಿತಿ ಔಷಧಿಗಳ ಮೇಲೆ
ಮೈಸೂರಿನ ನಾರಾಯಣ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಯ ಒಂದು ಘಟಕ